## 'ಹಾಟ್' ಪ್ರಿಯಾಂಕಾ

ಹಾಲಿವುಡ್‌ನಲ್ಲಿ ನಟಿ ಪ್ರಿಯಾಂಕಾ ಚೋಪ್ರಾ ಫುಲ್ ಬ್ಯುಸಿ. ಆಕೆ ನಟಿಸಿದ ಹಾಲಿವುಡ್ ಚಿತ್ರ 'ಕ್ವಾಂಟಿಕೋ' ಸೂಪರ್‌ಹಿಟ್ ಆಗಿ ಸಾಕಷ್ಟು ಹಣ ಮಾಡಿದೆ. ಈಗ ಅದರ ಎರಡನೇ ಭಾಗ ಶೂಟಿಂಗ್ ಸದ್ದಿಲ್ಲದೆ ನಡೆಯುತ್ತಿದೆ.

ಕ್ವಾಂಟಿಕೋ–2 ನಲ್ಲಿ ಪ್ರಿಯಾಂಕಾ ಮೈಬಿಸಿಯೇರಿಸುವ ದೃಶ್ಯಗಳಲ್ಲಿ ನಟಿಸಿದ್ದಾಳಂತೆ. ಪ್ರಿಯಾಂಕಾ ಹೀರೋ ಜಾಕ್ ಮೆಕ್ಲಾಗ್ಲಿನ್ ಜತೆಗೆ ಕ್ಲೋಸ್ ಆಗಿ ನಟಿಸಿರುವ ಹಲವು ಬಿಸಿ ದೃಶ್ಯಗಳು ಇಂಟರ್‌ನೆಟ್‌ನಲ್ಲಿ ಅತ್ಯಧಿಕ ನೋಡುಗರನ್ನು ಗಳಿಸಿದೆ.





## ರೀಮಾ ಕಣ್ಮರೆ

ಪೋಷಕ ಪಾತ್ರಗಳಲ್ಲಿ ಹಲವು ಹಿಟ್ ಚಿತ್ರಗಳನ್ನು ನೀಡಿದ ರೀಮಾ ಲಾಗೂ ಅವರ ಹಠಾತ್ ನಿಧನ ಬಾಲಿವುಡ್‌ನಲ್ಲಿ ಹಲವು ಆತ್ಮೀಯರನ್ನು ದಿಗ್ಭ್ರಮೆಗೊಳಿಸಿದೆ. ಸಂಜಯ್ ದತ್ ಅಂತೂ 'ನಾನು ಇನ್ನೊಮ್ಮೆ ಅಮ್ಮನನ್ನು ಕಳೆದುಕೊಂಡಿದ್ದೇನೆ' ಎಂದು ದುಃಖಿಸಿದ್ದಾನೆ. 'ವಾಸ್ತವ್' ಚಿತ್ರದಲ್ಲಿ ಈ ಅಮ್ಮ–ಮಗನ ಜೋಡಿಯ ನಟನೆ ಅಪಾರ ಪ್ರಶಂಸೆ ಗಳಿಸಿತ್ತು.

ಆದರೆ ಬಾಲಿವುಡ್‌ನಲ್ಲಿ ಈಗ ಚರ್ಚೆ ಆಗುತ್ತಿರುವುದು ಇಷ್ಟೊಂದು ಖ್ಯಾತ ನಟಿಯ ಅಂತ್ಯಕ್ರಿಯೆಯಲ್ಲಿ ಬಾಲಿವುಡ್‌ನ ಗಣ್ಯರು ಯಾರೂ ಏಕೆ ಭಾಗವಹಿಸಲಿಲ್ಲ ಎನ್ನುವುದು. ಸಂಜಯ್ ಕೂಡಾ ವಾಟ್ಸಪ್ ಮೆಸೇಜ್ ಕಳಿಸಿ ದುಃಖ ತೋಡಿಕೊಂಡಿದ್ದಾನೆಯೇ ಹೊರತು ಪ್ರತ್ಯಕ್ಷ ಹಾಜರಿರಲಿಲ್ಲ.

ಅಮೀರ್‌ಖಾನ್, ಕಾಜೋಲ್ ಮತ್ತು ರಿಶಿ ಕಪೂರ್ ಅವರನ್ನು ಬಿಟ್ಟರೆ ಇನ್ಯಾರೂ ಅಂತಿಮ ದರ್ಶನಕ್ಕೆ ಬರಲಿಲ್ಲ. ಖಯಾಮತ್ ಸೆ ಖಯಾಮತ್ ತಕ್, ಮೈನೆ ಪ್ಯಾರ್ ಕಿಯಾ, ಹಮ್ ಆಪ್ ಕೆ ಹೈ ಕೌನ್, ಕುಛ್ ಕುಛ್ ಹೋತಾ ಹೈ, ಕಲ್ ಹೋ ನ ಹೋ ಮುಂತಾದ ಚಿತ್ರಗಳಲ್ಲಿ ರೀಮಾ ಲಾಗೂ ಅವರ ನಟನೆಯನ್ನು ಮೆಚ್ಚದವರೇ ಇಲ್ಲ. ಬಹುತೇಕ ಖ್ಯಾತನಾಮರ ಚಿತ್ರಗಳಲ್ಲಿ ರೀಮಾ ಅವರಿಲ್ಲದೆ ಸಿನಿಮಾ ಆಗುತ್ತಿರಲಿಲ್ಲ. ಹಿಂದಿಯ ಹಲವು ಸೂಪರ್‌ಸ್ಟಾರ್ ನಿರ್ದೇಶಕರಿಗೆ ರೀಮಾ ಅಚ್ಚುಮೆಚ್ಚು. ಆದರೆ ಅವರು ಯಾರೂ ಅಂತಿಮಕ್ರಿಯೆಗೆ ಪತ್ತೆಯಿಲ್ಲ. 'ಶೀಘ್ರವಾಗಿ ಅಂತ್ಯಕ್ರಿಯೆ ಮುಗಿಸಿದ್ದಾರೆ. ಬೇರೆ ಕೆಲಸಗಳಲ್ಲಿ ಬ್ಯುಸಿ ಇದ್ದವರಿಗೆ ಬರಲು ಸಮಯ ಸಾಲಲಿಲ್ಲ' ಎನ್ನುವುದು ಇದಕ್ಕೆ ಬಾಲಿವುಡ್‌ನ ಕೆಲವರು ನೀಡುತ್ತಿರುವ ಕಾರಣ. ಎಲ್ಲರೂ ಅಮೀರ್‌ಗಿಂತ ಬ್ಯುಸಿ ಆಗಿದ್ದಾರೆಯೆ?!

ಅಂದ ಹಾಗೆ ಅಮೀರ್– ಅಮಿತಾಭ್ ನಟಿಸುತ್ತಿರುವ 'ಥಗ್ಸ್ ಆಫ್ ಹಿಂದೂಸ್ತಾನ್' ಚಿತ್ರದ ನಿರ್ಮಾಪಕ ಯಶ್‌ರಾಜ್ ಹೀರೋಯಿನ್‌ಅನ್ನು ಹುಡುಕುತ್ತಿದ್ದಾರಂತೆ. ಈ ಹಿಂದೆ 'ದಿಲ್ ತೊ ಪಾಗಲ್ ಹೈ' ಚಿತ್ರಕ್ಕೂ ಮಾಧುರಿ ಬಳಿಕ ಎರಡನೇ ಹೀರೋಯಿನ್ ಸಿಗದೆ ದೀರ್ಘ ಹುಡುಕಾಟ ನಡೆದಿತ್ತು. ಅಮೀರ್ ಖಾನ್‌ಗೆ ತಕ್ಕುದಾದ ಹೀರೋಯಿನ್ ಸಿಗದೆ ಚಿತ್ರದ ಶೂಟಿಂಗ್ ಆರಂಭವಾಗುವುದಿಲ್ಲ ಎನ್ನುವುದು ಸುದ್ದಿ.

■ ಬಿಂದು